ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಉಚ್ಚ ನ್ಯಾಯಾಲಯದ ಪೀಠವನ್ನು ಆದರ ಕೇಂದ್ರ ಸ್ಥಾನದಿಂದ ಹೊರಗೆ ಸ್ಥಾಪಿಸುವ ಬಗೆಗಿನ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯದ ಒಪ್ಪಿಗೆ ಪಡೆಯಬೇಕಾಗಿದ್ದು. ಆದರಂತೆ ಉಚ್ಚ ನ್ಯಾಯಾಲಯದ ಒಪ್ಪಿಗೆಯನ್ನು ಕೋರಲಾಗಿತ್ತು. ಆದರೆ. ಈ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯವು ಒಪ್ಪಿಗೆ ನೀಡಿಲ್ಲ. ಈ ಬಗ್ಗೆ ಪತ್ರ ವ್ಯವಹಾರ ಮುಂದುವರೆದಿದೆ.

ಆ) - " -

ಇ) - " -.

ರಾಜ್ಯದಲ್ಲಿರುವ ಸಿದ್ದದೋಷಿ ಬಂದಿಗಳ ಸಂಖ್ಯೆ.

1523. ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ) : ಮಾನ್ಯ ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರುವ ಸಿದ್ಧದೋಷಿ ಬಂದಿಗಳ ಸಂಖ್ಯೆ ಎಷ್ಟು? ಜಿಲ್ಲಾವಾರು ವಿವರ ನೀಡುವುದು.

ಆ) ಪ್ರತಿಯೊಬ್ಬ ಖೈದಿಯು ಗಳಿಸಿದ ಒಟ್ಟು ಹಣವೆಷ್ಟು?

ಇ) ಒಬ್ಬ ಖೈದಿಗೆ ಒಂದು ತಿಂಗಳಿಗೆ ಖರ್ಚು ಮಾಡುವ ಹಣವೆಷ್ಟು?

ಈ) 1990-91 ಮತ್ತು 1991-92ರ ಸಾಲಿನಲ್ಲಿ ದುಡಿಮೆಯಿಂದ ಉತ್ಪಾದಿಸಿದ ಒಟ್ಟು ಹಣವೆಷ್ಟು ?

ಶ್ರೀ ಡಿ.ಕೆ. ಶಿವಕುಮಾರ್ (ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು) :

ಅ) 1433 ಜನ ಸಿದ್ಧದೋಷಿ ಬಂದಿಗಳು ದಿನಾಂಕ 15-2-92 ರಂದು ಬಂಧೀಖಾನೆಗಳಲ್ಲಿ ಇದ್ದರು. ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ :

		ಸಿದ್ಧದೋಷಿ		ಒಟ್ಟು
		ಗಂಡಸರು	ಹೆಂಗಸರು	
1)	ಕೇಂದ್ರ ಕಾರಾಗೃಹ. ಬೆಂಗಳೂರು	336	15	351
2)	ಬೆಂಗಳೂರು ಗ್ರಾಮಾಂತರ	38	00	38
3)	ಬೆಳಗಾಂ ಜಿಲ್ಲೆ	370	07	377
4)	ಬಳ್ಳಾರಿ ಜಿಲ್ಲೆ	87	1	88
5)	ಬಿಜಾಪುರ ಜಿಲ್ಲೆ	78	00	78
6)	ಗುಲ್ಬರ್ಗಾ ಜಿಲ್ಲೆ	248	02	250
7)	ಮೈಸೂರು ಜಿಲ್ಲೆ	130	02	132
8)	ಬೀದರ್ ಜಿಲ್ಲೆ	01	00	01
9)	ಕಾರವಾರ ಜಿಲ್ಲೆ	02	00	02
10)	ಮಡಿಕೇರಿ ಜಿಲ್ಲೆ	-	-	-

11)	ಮಂಗಳೂರು ಜಿಲ್ಲೆ	08	00	08
12)	ರಾಯಚೂರು ಜಿಲ್ಲೆ	07	00	07
13)	ಶಿವಮೊಗ್ಗ ಜಿಲ್ಲೆ	26	00	26
14)	ಚಿಕ್ಕಮಗಳೂರು	-	-	-
15)	ಚಿತ್ರದುರ್ಗ	02	00	02
16)	ಧಾರವಾಡ	54	00	54
17)	ಹಾಸನ	01	00	01
18)	ಕೋಲಾರ	04	00	04
19)	ಮಂಡ್ಯ	05	00	05
20)	ತುಮಕೂರು	09	00	09
	ಮೊತ್ತ	**1406**	**27**	**1433**

ಆ) 1990-91 ಮತ್ತು 1991-92ನೇ ಸಾಲಿನಲ್ಲಿ ಖೈದಿಗಳು ಗಳಿಸಿದ ಸಂಪಾದನೆ ಮೊತ್ತ ಈ ಕೆಳಕಂಡಂತಿದೆ :

	ಕಾರ್ಖಾನೆ (ರೂ. ಲಕ್ಷಗಳಲ್ಲಿ)	ಸಿವಿಲ್ (ರೂ. ಲಕ್ಷಗಳಲ್ಲಿ)
1990-91	1:05	3:93
1991-92	0:96 (ಡಿಸೆಂಬರ್ 91ರ ವರೆಗೆ)	1:12 (ಡಿಸೆಂಬರ್ 91 ರವರೆಗೆ)

ಇ) ಒಂದು ತಿಂಗಳಿಗೆ ಒಬ್ಬ ಬಂಧಿಗೆ ಸರಾಸರಿ 1991-92 (ಡಿಸೆಂಬರ್ 91ರವರೆಗೆ) ರಲ್ಲಿ ಕೆಳಕಂಡಂತೆ ಖರ್ಚು ಮಾಡಲಾಗಿದೆ.

ಊಟದ ವೆಚ್ಚ ರೂ. 243-00

ಆಡಳಿತಾತ್ಮಕ ವೆಚ್ಚ ರೂ. 906-00

ಈ)

	ಕಾರ್ಖಾನೆ (ರೂ. ಲಕ್ಷಗಳಲ್ಲಿ)	ಸಿವಿಲ್ (ರೂ. ಲಕ್ಷಗಳಲ್ಲಿ)
1990-91	37:07	15:58
1991-92 (ಡಿಸೆಂಬರ್ 91ರವರೆಗೆ)	24:29	10:78